# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಹೇಮಾವತಿ ಬಲದಂಡೆ ನಾಲಾ ಸರಪಳಿ:0.00 ಕಿ.ಮೀ. ನಿಂದ 92.104 ಕಿ.ಮೀ ವರೆಗೆ ಆಧುನೀಕರಣ ಕಾಮಗಾರಿಯ ಡಿ.ಪಿ.ಆರ್. ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

** ** **

***ಓದಲಾಗಿದೆ :-***

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಬೆಂಗಳೂರು, ಇವರ ಪತ್ರ ಸಂಖ್ಯೆ:ಕಾನೀನಿ/ತಾಂತ್ರಿಕ-4/HRBC-791/2018-19/3493, ದಿನಾಂಕ:16-01-2019.

***ಪ್ರಸ್ತಾವನೆ :-***

ಮೇಲೆ ಓದಲಾದ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು, ಇವರು ಹೇಮಾವತಿ ನದಿಯು ಕಾವೇರಿ ನದಿಯ ಒಂದು ಉಪನದಿಯಾಗಿದ್ದು, ಇದು ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನಲ್ಲಿ ಪಶ್ಚಿಮ ಘಟ್ಟಗಳಲ್ಲಿ ಬಳ್ಳರಾಯನದುರ್ಗದ ಬಳಿ ಹುಟ್ಟಿ, ಹಾಸನ, ಮಂಡ್ಯ ಜಿಲ್ಲೆಗಳಲ್ಲಿ 192.00 ಕಿ.ಮೀ. ಹರಿದು ನಂತರ ಕೃಷ್ಣರಾಜಸಾಗರದ ಮೇಲ್ಭಾಗದಲ್ಲಿ ಕಾವೇರಿ ನದಿಯನ್ನು ಸೇರುತ್ತಿದ್ದು, ಈ ನದಿಗೆ ಅಡ್ಡಲಾಗಿ ಹಾಸನ ಜಿಲ್ಲೆಯ ಗೊರೂರು ಗ್ರಾಮದ ಬಳಿ ಅಣೆಕಟ್ಟನ್ನು ನಿರ್ಮಿಸಲಾಗಿರುತ್ತದೆ ಹಾಗೂ ಹೇಮಾವತಿ ಜಲಾಶಯವನ್ನು 1967-68 ರಲ್ಲಿ ಪ್ರಾರಂಭಿಸಿ 1978 ರಲ್ಲಿ ಪೂರ್ಣಗೊಳಿಸಲಾಗಿರುತ್ತದೆ ಎಂದು ವರದಿ ಮಾಡಿರುತ್ತಾರೆ.

2. ಹೇಮಾವತಿ ಅಣೆಕಟ್ಟಿನ ಉದ್ದ 4692.00 ಮೀ. ಮತ್ತು ಎತ್ತರ 44.50 ಮೀ. ಇರುತ್ತದೆ. ಒಟ್ಟು ನೀರಿನ ಸಂಗ್ರಹಣಾ ಸಾಮರ್ಥ್ಯ 37.103 ಟಿ.ಎಂ.ಸಿ. ಇದ್ದು, ಇದರಲ್ಲಿ ಡೆಡ್ ಸ್ಟೋರೇಜ್ 1.343 ಟಿ.ಎಂ.ಸಿ. ಮತ್ತು ಲೈವ್ ಸ್ಟೋರೇಜ್ 35.760 ಟಿ.ಎಂ.ಸಿ. ಆಗಿರುತ್ತದೆ. ಪೂರ್ಣ ಜಲಾಶಯದ ಮಟ್ಟ 890.63 ಮೀ. ಆಗಿರುತ್ತದೆ. ಅಣೆಕಟ್ಟು ಮಧ್ಯ ಭಾಗದಲ್ಲಿ ಮೇಸನರಿ ಸ್ಪಿಲ್‌ವೇ ಇದ್ದು, ಎರಡೂ ತುದಿಗಳಲ್ಲಿ ಮಣ್ಣಿನ ಏರಿಯನ್ನು ಒಳಗೊಂಡಿರುತ್ತದೆ. ಮಧ್ಯಭಾಗದ ಸ್ಪಿಲ್‌ವೇಯು 10.67 x 9.14 ಮೀ. ಅಳತೆಯ 05 ರೇಡಿಯಲ್ ಗೇಟುಗಳು ಹಾಗೂ 5 ಸಂಖ್ಯೆ 2.44 x 4.26 ಮೀಟರ್ ಅಳತೆಯ ರಿವರ್ ಸ್ಲೂಯೀಸ್ ಗೇಟುಗಳನ್ನು ಹೊಂದಿರುತ್ತದೆ.

3. ಕಾವೇರಿ ಜಲವಿವಾದ ನ್ಯಾಯಮಂಡಳಿಯ ಅಂತಿಮ ತೀರ್ಪಿನಲ್ಲಿ ಹೇಮಾವತಿ ಯೋಜನೆಗೆ 43.67 ಟಿ.ಎಂ.ಸಿ. ನೀರನ್ನು ಹಂಚಿಕೆ ಮಾಡಿದ್ದು, ಇದರಲ್ಲಿ ಹೇಮಾವತಿ ಯೋಜನಾ ವಲಯ, ಗೊರೂರಿಗೆ 18.853 ಟಿ.ಎಂ.ಸಿ ಹಾಗೂ ಹೇಮಾವತಿ ನಾಲಾ ವಲಯ, ತುಮಕೂರು ವ್ಯಾಪ್ತಿಗೆ 24.817 ಟಿ.ಎಂ.ಸಿ. ನೀರಿನ ಹಂಚಿಕೆಯಾಗುತ್ತದೆ.

4. ಹೇಮಾವತಿ ಜಲಾಶಯವು ಹೇಮಾವತಿ ಎಡದಂಡೆ ನಾಲೆ, ಹೇಮಾವತಿ ಬಲದಂಡೆ ನಾಲೆ ಹಾಗೂ ಹೇಮಾವತಿ ಬಲಮೇಲ್ದಂಡೆ ನಾಲೆ (ಒಟ್ಟು 03 ಮುಖ್ಯ ನಾಲೆ) ಗಳನ್ನು ಹೊಂದಿದ್ದು, ಮತ್ತು ಹೇಮಾವತಿ ಎಡದಂಡೆ ನಾಲೆಯ ಸರಪಳಿ 72.267 ಕಿ.ಮೀ. ನಲ್ಲಿ 02 ಶಾಖಾ ನಾಲೆಗಳನ್ನು ಹೊಂದಿರುತ್ತವೆ.

5. ನಾಲೆಯ ಉದ್ದವು 92.104 ಕಿ.ಮೀ ಇದ್ದು, ನೀರಿನ ಹರಿವಿನ ಸಾಮರ್ಥ್ಯ 401 ಕ್ಯುಸೆಕ್‌ಗಳಾಗಿರುತ್ತದೆ. ಸದರಿ ನಾಲೆಯಿನ್ನು Khariff Paddy – 7216 ಎಕರೆ, Khariff Semi dry – 12784 ಎಕರೆ ಅಚ್ಚುಕಟ್ಟಿಗೆ ನೀರಾವರಿ ಒದಗಿಸಲು ಉದ್ದೇಶಿಸಲಾಗಿದೆ.

6. ಸದರಿ ನಾಲೆಯನ್ನು ನಿರ್ಮಿಸಿ ಸುಮಾರು 30 ವರ್ಷಗಳಿಗೂ ಅಧಿಕ ಸಮಯವಾಗಿದ್ದು, ಇದರಿಂದಾಗಿ ನಾಲೆಯ ಏರಿಯು ಶಿಥಿಲವಾಗಿರುವುದು, ಅಡ್ಡಮೋರಿಗಳು ಶಿಥಿಲವಾಗಿರುವುದು, ಲೈನಿಂಗ್ ಹಾಳಾಗಿರುವುದು ಮತ್ತು ರೈತರು ಹೆಚ್ಚಿನ ಭಾಗದಲ್ಲಿ ಅರೆಖುಷ್ಕಿ ಬೆಳೆಗೆ ಬದಲಾಗಿ ಭತ್ತವನ್ನೇ ಬೆಳೆಯುತ್ತಿರುವುದು ಮುಂತಾದ ಕಾರಣಗಳಿಂದಾಗಿ ಮುಖ್ಯ ನಾಲೆಯ 65ನೇ ಕಿಮೀ ನಿಂದ ಮುಂದಕ್ಕೆ ನೀರು ಹರಿಸಲು ಸಾಧ್ಯವಾಗಿರುವುದಿಲ್ಲ. ಅಲ್ಲದೇ, ವಿತರಣಾ ನಾಲೆಗಳಲ್ಲಿ ಕೊನೆಯ ಹಂತದವರೆಗೆ ಸಮರ್ಪಕವಾಗಿ ನೀರನ್ನು ಹರಿಸಲು ಸಾಧ್ಯವಾಗಿರುವುದಿಲ್ಲ. ಇದರಿಂದಾಗಿ ಸದರಿ ನಾಲೆಯಲ್ಲಿ 20000 ಎಕರೆಗೆ ಬದಲಾಗಿ 15300 ಎಕರೆಯಲ್ಲಿ ಮಾತ್ರ ಬೆಳೆ ಬೆಳೆದಿದ್ದು, ನೀರು ಕರವನ್ನು ವಿಧಿಸಲಾಗಿರುತ್ತದೆ. ಹೊಳೆನರಸೀಪುರ ತಾಲ್ಲೂಕಿನಲ್ಲಿ ಬರುವ ಉಳಿದ 4700 ಎಕರೆ ನೀರಾವರಿಯಿಂದ ವಂಚಿತವಾಗಿರುತ್ತದೆ.

7. ಈ ರೀತಿ ನೀರಾವರಿಯಿಂದ ವಂಚಿತವಾಗಿರುವ ಪ್ರದೇಶಕ್ಕೆ ಸಮರ್ಪಕವಾಗಿ ನೀರು ಹರಿಸಲು ಅನುಕೂಲವಾಗುವಂತೆ ನಾಲೆಯನ್ನು ಆಧುನೀಕರಣಗೊಳಿಸಲು ಉದ್ದೇಶಿಸಲಾಗಿದೆ. ಈ ಹಿನ್ನೆಲೆಯಲ್ಲಿ ನಾಲೆಯ ಆಧುನೀಕರಣಕ್ಕೆ ಪೂರಕವಾಗಿ ನಾಲೆಯ ಹಾಲಿ ಸ್ಥಿತಿಗತಿಗಳನ್ನು ಅವಲೋಕಿಸಿ, ನಾಲೆಯಲ್ಲಿ 401 ಕ್ಯೂಸೆಕ್ಸ್ ನೀರು ಹರಿಯಲು ಅನುವಾಗುವ ರೀತಿಯಲ್ಲಿ ಆಧುನೀಕರಣಗೊಳಿಸಲು ಉದ್ದೇಶಿಸಲಾಗಿರುತ್ತದೆ. ಸದರಿ ಪ್ರಸ್ತಾವನೆಗೆ ದಿನಾಂಕ:09-01-2019 ರಂದು ನಡೆದ ಕಾವೇರಿ ನೀರಾವರಿ ನಿಗಮದ 66ನೇ ಮಂಡಳಿಯ ಸಭೆಯಲ್ಲಿ ಅನುಮೋದನೆಯಾಗಿರುತ್ತದೆ.

8. ಈ ಹಿನ್ನೆಲೆಯಲ್ಲಿ, ಹೇಮಾವತಿ ಬಲದಂಡೆ ನಾಲಾ ಸರಪಳಿ:0.00 ಕಿ.ಮೀ. ನಿಂದ 92.104 ಕಿ.ಮೀ ವರೆಗೆ ಆಧುನೀಕರಣ ಕಾಮಗಾರಿಯ ರೂ.422.75 ಕೋಟಿ ಮೊತ್ತದ ವಿವರವಾದ ಯೋಜನಾ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡುವಂತೆ ಕೋರಿ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

9. ಆರ್ಥಿಕ ಇಲಾಖೆಯು ತನ್ನ ದಿನಾಂಕ:20-06-2019 ರ ಟಿಪ್ಪಣಿಯಲ್ಲಿ ಈ ಕೆಳಕಂಡಂತೆ ಸಹಮತಿ ನೀಡಿರುತ್ತದೆ :

> *"ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ. ಪ್ರಸ್ತಾಪಿತ ಯೋಜನೆಯನ್ನು ಎರಡು ಹಂತಗಳಲ್ಲಿ, ಅಂದರೆ ಮೊದಲನೇ ಹಂತ ರೂ.250.00 ಕೋಟಿ ಮತ್ತು ಎರಡನೇ ಹಂತ ರೂ.172.75 ಕೋಟಿ, ಒಟ್ಟಾರೆ ರೂ.422.75 ಕೋಟಿ ಮೊತ್ತದಲ್ಲಿ ಕೈಗೊಳ್ಳಲು ಹಾಗೂ ಮೊದಲನೇ ಹಂತಕ್ಕೆ ಮಾತ್ರ ಈಗ ಟೆಂಡರ್ ಕರೆಯಲು ಕರಡು ಸಚಿವ ಸಂಪುಟ ಟಿಪ್ಪಣಿಯನ್ನು ಸೂಕ್ತವಾಗಿ ಮಾರ್ಪಾಡು ಮಾಡಿ, ಸಚಿವ ಸಂಪುಟದ ಮುಂದೆ ಮಂಡಿಸಲು ಮಾನ್ಯ ಮುಖ್ಯಮಂತ್ರಿಯವರು ಅನುಮೋದಿಸಿರುತ್ತಾರೆ."*

10. ದಿನಾಂಕ:28-06-2019 ರಂದು ನಡೆದ ಸಚಿವ ಸಂಪುಟದ ಸಭೆಯಲ್ಲಿ ಮೇಲ್ಕಂಡ ಪ್ರಸ್ತಾವನೆಯನ್ನು ಅನುಮೋದಿಸಲಾಗಿತ್ತು.

11. ಮಾನ್ಯ ಮುಖ್ಯಮಂತ್ರಿಯವರ ದಿನಾಂಕ:08-07-2019 ರ ಟಿಪ್ಪಣಿಯಲ್ಲಿ ನೀರಾವರಿ ವಂಚಿತ ಮತ್ತು ಬರಪೀಡಿತ ಪ್ರದೇಶಗಳಿಗೆ ತ್ವರಿತವಾಗಿ ನೀರುಣಿಸಲು ಅನುವಾಗುವಂತೆ ಕಾಮಗಾರಿಯನ್ನು ಒಂದೇ ಹಂತದಲ್ಲಿ ಕೈಗೊಳ್ಳಲು ಸೂಚಿಸಿರುತ್ತಾರೆ. ಅದರನ್ವಯ, ಆರ್ಥಿಕ ಇಲಾಖೆಯು ತನ್ನ ದಿನಾಂಕ:18-07-2019 ರ ಟಿಪ್ಪಣಿಯಲ್ಲಿ ಈ ಕೆಳಕಂಡಂತೆ ಸಹಮತಿ ನೀಡಿರುತ್ತದೆ :

> *"ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ. ಹೇಮಾವತಿ ಬಲದಂಡೆ ನಾಲಾ ಸರಪಳಿ 0.00 ಕಿ.ಮೀ. ನಿಂದ 92.104 ಕಿ.ಮೀ.ವರೆಗೆ ಆಧುನೀಕರಣ ಕಾಮಗಾರಿಯ ಯೋಜನೆಯ 2 ಹಂತವನ್ನು ಒಟ್ಟಿಗೆ ಟೆಂಡರ್ ಕರೆಯಲು ಒಪ್ಪಿರುವುದಾಗಿ ಹಾಗೂ ಸಚಿವ ಸಂಪುಟದ ಘಟನೋತ್ತರ ಅನುಮೋದನೆಯನ್ನು ಕಾಯ್ದಿರಿಸಿ, ಆದೇಶ ಹೊರಡಿಸುವುದೆಂದು ತಿಳಿಸಲು ಮಾನ್ಯ ಮುಖ್ಯಮಂತ್ರಿಯವರು ಅನುಮೋದಿಸಿರುತ್ತಾರೆ."*

12. ಸದರಿ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

## ಸರ್ಕಾರಿ ಆದೇಶ ಸಂಖ್ಯೆ : ಜಸಂಇ 1 ಎನ್‌ಹೆಚ್‌ಪಿ 2019, ಬೆಂಗಳೂರು, ದಿನಾಂಕ : 18-07-2019

ಹೇಮಾವತಿ ಬಲದಂಡೆ ನಾಲಾ ಸರಪಳಿ:0.00 ಕಿ.ಮೀ. ನಿಂದ 92.104 ಕಿ.ಮೀ ವರೆಗೆ ಆಧುನೀಕರಣ ಕಾಮಗಾರಿಯ ರೂ.422.75 ಕೋಟಿ (ರೂಪಾಯಿ ನಾಲ್ಕುನೂರಾ ಇಪ್ಪತ್ತೆರಡು ಕೋಟಿ ಎಪ್ಪತ್ತೈದು ಲಕ್ಷಗಳು ಮಾತ್ರ) ಗಳ ಮೊತ್ತದ ವಿವರವಾದ ಯೋಜನಾ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

2. ಈ ಆದೇಶವನ್ನು ಆರ್ಥಿಕ ಇಲಾಖೆಯು ತನ್ನ ಟಿಪ್ಪಣಿ ಸಂಖ್ಯೆ:ಆಇ 397 ಆಕೋ-1/2019, ದಿನಾಂಕ:18-07-2019, ರಲ್ಲಿ ನೀಡಲಾದ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

18/07/19

(ಬಿ.ಹರಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ-2)
ಜಲ ಸಂಪನ್ಮೂಲ ಇಲಾಖೆ.

( ಬಿ. ಹರಿನಾರಾಯಣ )
ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ-2)
ಜಲಸಂಪನ್ಮೂಲ ಇಲಾಖೆ
ಕೊಠಡಿ ಸಂಖ್ಯೆ 316, 3ನೇ ಮಹಡಿ
ವಿಕಾಸಸೌಧ, ಬೆಂಗಳೂರು - 560 001

<u>ಇವರಿಗೆ</u> :-

1. ಪ್ರಧಾನ ಮಹಾಲೇಖಪಾಲರು, (ಸಾಮಾನ್ಯ ಮತ್ತು ಸಾಮಾಜಿಕ ವಲಯ ಲೆಕ್ಕಪರಿಶೋಧನ), ಕರ್ನಾಟಕ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಬೆಂಗಳೂರು.
3. ಮುಖ್ಯ ಇಂಜಿನಿಯರ್, ಹೇಮಾವತಿ ಯೋಜನಾ ವಲಯ, ಗೊರೂರು.
4. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ಲೋ.ಇ. ಆರ್ಥಿಕ ಕೋಶ), ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಉಪ ಕಾರ್ಯದರ್ಶಿ (ಸಚಿವ ಸಂಪುಟ), ಕರ್ನಾಟಕ ಸರ್ಕಾರ (ಪ್ರಕರಣ ಸಂಖ್ಯೆ:ಸಿ-380/2019, ದಿನಾಂಕ:28-06-2019).
6. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.